ಕರ್ನಾಟಕ ಸರ್ಕಾರ

ಹೇಳಿಕೆ ಹಾಳೆ
(ಆರ್.ಪಿ ಸಂಖ್ಯೆ 57)
ನಮೂನೆ ಸಂಖ್ಯೆ-4
(ಸಿವಿಲ್))

# ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ

## ಸಿ.ಸಿ.ನಂ : 125/2010

| | | |
|---|---|---|
| ಹೆಸರು | : | ರಮೇಶ ಬಿರಾದಾರ |
| ತಂದೆಯ ಹೆಸರು | : | ದೇವಪ್ಪ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಅಬಕಾರಿ ಉಪ-ನಿರೀಕ್ಷಕರು ಕಾರವಾರ |
| ವಾಸಸ್ಥಳ | : | ಕಾರವಾರ |
| ದಿನಾಂಕಃ | ಃ | 16-10-2018 ಸತ್ಯಪ್ರತಿಜ್ಞೆ ಮೇರೆಗೆ |

**ಸಾಕ್ಷಿಯ ಹೇಳಿಕೆ ಃ**

ನ್ಯಾಯಾಲಯವು ಹೊರಡಿಸಿದ್ದ ಉದ್ಘೋಷಣೆಯ ಆದೇಶದ ಪ್ರಕಾರ ಅಂತಿಮ ವರದಿಯಲ್ಲಿ ನಮೂದು ಮಾಡಲಾದ ಆರೋಪಿಯ ವಿಳಾಸಕ್ಕೆ ದಿನಾಂಕ 14-03-2018 ರಂದು ಚಿತ್ತೂರು ಜಿಲ್ಲೆಯ ತೋಡತ್ತೂರು ಗ್ರಾಮಕ್ಕೆ ಗ್ರಾಮ ಲೆಕ್ಕಾಧಿಕಾರಿಯೊಂದಿಗೆ ಆರೋಪಿಯ ತಪಾಸಣೆಗಾಗಿ ಹೋಗಿದ್ದು, ಆರೋಪಿಯನ್ನು ಪತ್ತೆ ಹಚ್ಚುವ ಸಲುವಾಗಿ ಗ್ರಾಮ ಪಂಚಾಯತಿಗೆ ಎಲ್ಲಾ ಸದಸ್ಯರನ್ನು ಬರಮಾಡಿಕೊಂಡು ಈ ಬಗ್ಗೆ ಢಂಗುರ ಸಾರಿ ಸದರಿ ವ್ಯಕ್ತಿಯ ಬಗ್ಗೆ ಹಾಗೂ ಆತನ ಚರಾಸ್ತಿ ಮತ್ತು ಸ್ಥಿರಾಸ್ತಿಯ ಬಗ್ಗೆ ವಿಚಾರಿಸಲಾಗಿ ಶ್ರೀನಿವಾಸಲು ಎಂಬ ವ್ಯಕ್ತಿ ಯಾರೂ ಇರುವುದಿಲ್ಲವೆಂದು ಮತ್ತು ಆತನಿಗೆ ಸಂಬಂಧಪಟ್ಟ ಯಾವುದೇ ಚರಾಸ್ತಿ ಮತ್ತು ಸ್ಥಿರಾಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ತಿಳಿಸಿರುತ್ತಾರೆ. ಪಂಚರು ಜಗನಮೋಹನರೆಡ್ಡಿ, ಅಮೃತರೆಡ್ಡಿ, ಎ.ಈಶ್ವರಿ ಹಾಗೂ ಕಂದಾಯ ಅಧಿಕಾರಿಗಳು ಇವರುಗಳು ಪಂಚರಾಗಿದ್ದು, ಆರೋಪಿಗೆ ಸಂಬಂಧಪಟ್ಟ ಮತದಾರರ ಪಟ್ಟಿಯನ್ನು ಪರೀಕ್ಷಿಸಲಾಗಿ ಸದರಿ ವ್ಯಕ್ತಿಯ ಹೆಸರು ಮತದಾರರ ಪಟ್ಟಿಯಲ್ಲಿ ನಮೂದು ಇಲ್ಲದೇ ಇರುವುದು ಕಂಡುಬಂದಿತು. ಪಂಚಾಯತಿ ಕಾರ್ಯಾಲಯದಲ್ಲಿ, ಬಸ್ ಸ್ಟ್ಯಾಂಡ್‌ನಲ್ಲಿ, ಮುಂತಾದ ಸಾರ್ವಜನಿಕ ಸ್ಥಳದಲ್ಲಿ ಉದ್ಘೋಷಣಾ ನೋಟಿಸನ್ನು ಅಂಟಿಸಿ ಸದರಿ ವ್ಯಕ್ತಿಯು ಕಂಡುಬಂದಲ್ಲಿ ತಿಳಿಸುವಂತೆ ವಿನಂತಿಸಿಕೊಂಡಿರುತ್ತೇವೆ. ಸದರಿ ಪಂಚನಾಮೆ ಅನ್ನು ಮ.12ಃ30 ರಿಂದ 02ಃ00 ಗಂಟೆವರೆಗೆ ಬರೆಯಲಾಯಿತು. ಆರೋಪಿಗೆ ಸಂಬಂಧಪಟ್ಟಂತೆ ಯಾವುದೇ ಚರಾಸ್ತಿ ಮತ್ತು ಸ್ಥಿರಾಸ್ತಿ ಇಲ್ಲದೇ ಇರುವ ಬಗ್ಗೆ ಸಂಬಂಧಪಟ್ಟ ಕಂದಾಯ ಅಧಿಕಾರಿಗಳನ್ನು ಸಂಪರ್ಕಿಸಿ ಈ ಬಗ್ಗೆ ಖಚಿತಪಡಿಸಿಕೊಂಡಿರುತ್ತೇವೆ. ಪಂಚನಾಮೆಯನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯವು ಹೊರಡಿಸಿದ್ದ ಉದ್ಘೋಷಣೆಯ ಆದೇಶದ ಪ್ರಕಾರ ಅಂತಿಮ ವರದಿಯಲ್ಲಿ ನಮೂದು ಮಾಡಲಾದ 2ನೇ ಆರೋಪಿತನಾದ ಲೋಕನಾಥ ತಂದೆ ಚಂದ್ರಯ್ಯ ವಿಳಾಸಕ್ಕೆ ದಿನಾಂಕ 13-03-2018 ರಂದು ಚಿತ್ತೂರು ಜಿಲ್ಲೆಯ ಅನುಪಲ್ಲಿ ಗ್ರಾಮಕ್ಕೆ ಗ್ರಾಮ ಲೆಕ್ಕಾಧಿಕಾರಿಯೊಂದಿಗೆ ಆರೋಪಿಯ ತಪಾಸಣೆಗಾಗಿ ಹೋಗಿದ್ದು, ಆರೋಪಿಯನ್ನು ಪತ್ತೆ ಹಚ್ಚುವ ಸಲುವಾಗಿ ವೆಂಕಟರಾಮರೆಡ್ಡಿ, ಚಂದ್ರಪ್ಪ ಮತ್ತು ಗಂಗಪ್ಪ ತಂದೆ ರಾಜನ್ ಇವರನ್ನು ಬರಮಾಡಿಕೊಂಡು ಈ ಬಗ್ಗೆ ಢಂಗುರ ಸಾರಿ ಸದರಿ ವ್ಯಕ್ತಿಯ ಬಗ್ಗೆ ಹಾಗೂ ಆತನ ಚರಾಸ್ತಿ ಮತ್ತು ಸ್ಥಿರಾಸ್ತಿಯ ಬಗ್ಗೆ ವಿಚಾರಿಸಲಾಗಿ ಲೋಕನಾಥ ತಂದೆ ಚಂದ್ರಯ್ಯ ಎಂಬ ವ್ಯಕ್ತಿ ಯಾರೂ ಇರುವುದಿಲ್ಲವೆಂದು ಮತ್ತು ಆತನಿಗೆ ಸಂಬಂಧಪಟ್ಟ ಯಾವುದೇ ಚರಾಸ್ತಿ ಮತ್ತು ಸ್ಥಿರಾಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ತಿಳಿಸಿರುತ್ತಾರೆ. ಪಂಚರು ವೆಂಕಟರಾಮರೆಡ್ಡಿ, ಚಂದ್ರಪ್ಪ ಮತ್ತು ಗಂಗಪ್ಪ ತಂದೆ ರಾಜನ್ ಇವರುಗಳು ಪಂಚರಾಗಿದ್ದು, ಆರೋಪಿಗೆ ಸಂಬಂಧಪಟ್ಟ ಮತದಾರರ ಪಟ್ಟಿಯನ್ನು ಪರೀಕ್ಷಿಸಲಾಗಿ ಸದರಿ ವ್ಯಕ್ತಿಯ ಹೆಸರು ಮತದಾರರ ಪಟ್ಟಿಯಲ್ಲಿ ನಮೂದು ಇಲ್ಲದೇ ಇರುವುದು ಕಂಡುಬಂದಿತು. ಪಂಚಾಯತಿ ಕಾರ್ಯಾಲಯದಲ್ಲಿ, ಬಸ್ ಸ್ಟ್ಯಾಂಡ್‌ನಲ್ಲಿ, ಮುಂತಾದ ಸಾರ್ವಜನಿಕ ಸ್ಥಳದಲ್ಲಿ ಉದ್ಘೋಷಣಾ ನೋಟಿಸನ್ನು ಅಂಟಿಸಿ ಸದರಿ ವ್ಯಕ್ತಿಯು ಕಂಡುಬಂದಲ್ಲಿ ತಿಳಿಸುವಂತೆ ವಿನಂತಿಸಿಕೊಂಡಿರುತ್ತೇವೆ. ಸದರಿ ಪಂಚನಾಮೆಯನ್ನು ಮ.04ಃ00 ರಿಂದ 05ಃ30 ಗಂಟೆವರೆಗೆ ಬರೆಯಲಾಯಿತು. ಉದ್ಘೋಷಣೆ ಹೊರಡಿಸುವ ಮೊದಲೇ ಆರೋಪಿಗೆ ಸಂಬಂಧಪಟ್ಟಂತೆ ಇರುವ ಚರಾಸ್ತಿ ಮತ್ತು ಸ್ಥಿರಾಸ್ತಿಗಳ ಬಗ್ಗೆ ಕಂದಾಯ ಅಧಿಕಾರಿಗಳನ್ನು ವಿಚಾರಿಸಿದಾಗ ಕಂದಾಯ ಅಧಿಕಾರಿಗಳು ದಿನಾಂಕ 03-07-2014 ರಂದು ಸದರಿ ಆರೋಪಿತನಿಗೆ ಸಂಬಂಧಪಟ್ಟ ಸ್ವತ್ತುಗಳ ವಿವರವನ್ನು ನೀಡಿದ್ದು, ಸದರಿ ವಿವರದಲ್ಲಿ 2ನೇ ಆರೋಪಿತನಿಗೆ ಸಂಬಂಧಪಟಂತೆ ಯಾವುದೇ ಆಸ್ತಿ ಇಲ್ಲವೆಂದು ಆದರೆ ಆತನ ತಂದೆ ಚಂದ್ರಯ್ಯ ಇವರಿಗೆ ಸಂಬಂಧಪಟ್ಟ ಮನೆ ಮತ್ತು ಹೊಲದ ವಿವರಗಳನ್ನು ಸಲ್ಲಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೆ. ಸರಿ ಇದೆ

ಪ್ರ.ದ.ನ್ಯಾ.ದಂ. ಚಿಂಚೋಳಿ